'ನನಗೆ ನಿಮ್ಮ ವಯಸ್ಸಿನ ಗಂಡಸರಿಗೆ ಹೊಟ್ಟೆ, ಬೊಜ್ಜು ಇಲ್ಲದಿದ್ದರೆ ಇಷ್ಟವೇ ಆಗಲ್ಲ...' ಅಂತಂದು, ನನ್ನ ಮುಜುಗರವನ್ನು ಇನ್ನೂ ಹೆಚ್ಚಿಸಿಬಿಟ್ಟ. 'ಏನು ಗೊತ್ತಾ? ನಾನು ವಾಪಸು ಹೋದಮೇಲೆ ನಿಮ್ಮನ್ನು ತುಂಬಾ ತುಂಬಾ ಮಿಸ್ ಮಾಡಿಕೋತೀನಿ!'

ಅವೊತ್ತು ಶ್ರವಣನ ಬಳಸುಗೈಗಳಿಂದ ನನ್ನನ್ನು ನಾನು ತೆಗೆದುಕೊಳ್ಳಲು ನಿಜಕ್ಕು ತುಸು ತ್ರಾಸೇ ಆಗಿತ್ತು!

★★★

ಎರಡುಮೂರು ದಿವಸಗಳಿಂದ ಶ್ರವಣ್, ತುಸು ಮ್ಲಾನವಾಗಿದ್ದಾನೆ. ಯಾವುದೋ ಯೋಚನೆಯಲ್ಲಿ ಕಳೆದುಹೋದಂತನಿಸುತ್ತಾನೆ. ಏನೆಂದು ಕೇಳಿದರೆ, ಹಾರಿಕೆಯ ಉತ್ತರ ಕೊಡುತ್ತಾನೆ. ಕೆದಕಿದರೆ, 'ಅಂಥದ್ದೇನಿಲ್ಲ, ಈಶ್...' ಅಂತನ್ನುತ್ತಾನೆ. ಕೆಲವೊಮ್ಮೆ, ಏನೂ ವಿಚಾರಿಸಿಕೊಳ್ಳದೆಯೆ, ಕಂಪ್ಯೂಟರಿನಲ್ಲಿ ತೊಡಗಿರುವ ನನ್ನನ್ನು ಬೆನ್ನಿನಲ್ಲಿ ನಿಂತು ಬಳಸಿ ಹಿಡಿದು, 'ಏನು ಗೊತ್ತಾ? ನನಗೆ ನಿಮ್ಮನ್ನು ಬಿಟ್ಟುಹೋಗುವ ಮನಸ್ಸೇ ಬರುತಿಲ್ಲ... ಕೆಲಸ ಬಿಟ್ಟುಬಂದರೆ ಬಿಟ್ಟಿಕೂಳಿತ್ತು ಸಾಕಿಕೋತೀರಾ, ಈಶ್?' ಅಂತಂದು ಕೇಳಿ, ನಾನು ಕಕ್ಕಾವಿಕ್ಕಿಗೊಳ್ಳುವಾಗ, ಕಣ್ಣು ಮಿಟುಕಿ, 'ಸುಮ್ಮನೆ ಹೇಳಿದೆ... ಐ ವಾಸ್ ಜಸ್ಟ್ ಕಿಡ್ಡಿಂಗ್...' ಅಂತಂದು, ಒಮ್ಮೆಗೇ ನಕ್ಕುಬಿಟ್ಟಿದ್ದಾನೆ.

ಇಂತಹ ಹೇಳಿಕೆಗಳಿಗೆ ಏನೆಂದು ಉತ್ತರಿಸುವುದು? ಇವನ್ನು ಏನಂತ ಅರ್ಥೈಸುವುದು? ಮಕ್ಕಳಾಟವೆ? ಹುಚ್ಚಾಟವೆ? ತೋಚದೆ ಸುಮ್ಮನಾಗಿದ್ದೇನೆ.

'ನೀನು ನಿಜಕ್ಕು ಕೆಲಸ ಬಿಟ್ಟು ಬಂದಿರೋದು, ಹೌದೇನೋ ಹುಡುಗ?!' ಎಂದು ಕೇಳುವಾಗ, 'ನೀವೊಮ್ಮೆ ಯೆಸ್ಸಂತ ಹೇಳಿ, ಈಶ್... ಆಗ ನೋಡಿ!!' ಎಂದು ನಗುತ್ತಲೇ ಹೇಳಿ, ಆ ನಗುವಿನ ಕಡೆಯಲ್ಲಿ ತುಸುವೇ ಗದ್ಗದವನ್ನು ತಾಳುತ್ತಾನೆ.

ಯಾಕೋ ಅಜೀಬನಿಸುತ್ತದೆ.

★★★

'ಲವ್ಯೂ ಈಶ್, ಲವ್ಯೂ ಸೋ ಮಚ್...' ಎಂದು ಒಮ್ಮೆಗೇ ನನ್ನ ಮೋರೆಗೆನ್ನೆಗಳಲ್ಲೆಲ್ಲ ಮುದ್ದುಗರೆದವನನ್ನು, ಮೆಲ್ಲಗೆ ಹಿಂದಳ್ಳಿ, ನಾನೂ ಹಿಮ್ಮೆಟ್ಟಿ ನಿಂತು, 'ಶ್ರವಣ್... ಬಿಹೇವ್ ಯುವರ್ಸೆಲ್ಫ್!' ಎಂದು ಮೃದುವಾಗಿ ಗದರಿದೆ. ಒಮ್ಮೆಗೇ ಪೆಚ್ಚುಮೋರೆ ತಾಳಿಕೊಂಡು ಸುಮ್ಮಗಾದ. ಒಮ್ಮಿಂದೊಮ್ಮೆ ಅಳುಮುಂದಾಗಿ ಬಂದಂತನ್ನಿಸಿತು. 'ಶ್ರವಣ್, ಎರಡು ವ್ಯಕ್ತಿಗಳು ಎಷ್ಟೇ ಪರಸ್ಪರ ಕಕುಲಾತಿಯಿಟ್ಟುಕೊಂಡಿದ್ದರೂ ಒಂದು ಅಂತರವನ್ನು ಕಾಯ್ದುಕೋಬೇಕಾಗುತ್ತೆ... ಜ್ಞಾಪಕವಿರಲಿ...' ಎಂದು ಅವನ ಹೆಗಲುದಡವಿ ಹೇಳಿದೆ. ಈಗ ಅವನ ಕಣ್ಣುಗಳು ಹೊರಗುಕ್ಕಿಸಿದ ಅಳಲನ್ನು ಹತ್ತಿಕ್ಕಲಿಲ್ಲ. ಒಂದೇ ಸಮ ಬಿಕ್ಕಿ ಬಿಕ್ಕಿ ಅತ್ತುಬಿಟ್ಟ. 'ಏನಾಯಿತು, ಶ್ರವಣ್... ವಾಟ್ ಹ್ಯಾಪನ್ಡ್?' ಎಂದು ವಿಚಾರಿಸುತ್ತ ಹತ್ತಿರವಾದೆ. ನನ್ನ ಎದೆಗೆ ತಲೆಯಾನಿಸಿಕೊಂಡು ಅಳತೊಡಗಿದ. ಕನಕದುರ್ಗೆಯ ಸೇವೆಯಲ್ಲಿದ್ದ ಪೆಂಟಮ್ಮ, ಶ್ರವಣನ ಬಿಕ್ಕು ಕೇಳಿಸಿದ್ದೇ, ಕೋಣೆಯಿಂದ ಹೊರಬಂದು ಇಬ್ಬರನ್ನೂ ನೋಡಿಕೊಂಡು ಕೆಲಕಾಲ ಸ್ತಬ್ಧವುಳಿದಳು. ಅವಳನ್ನು ಕಣ್ಣಿನಲ್ಲಿಯೇ ಸಂಜ್ಞೆಗೈದು ಒಳಹೋಗಹೇಳಿದೆ. ಬಳಿಕ, ಶ್ರವಣನನ್ನು ಅವನ ರೂಮಿನವರೆಗೂ ಒಯ್ದು ಕೆಲಕಾಲ ಮಲಗಿಯೇಳೆಂದು ಹೇಳಿದೆ.

ಅಷ್ಟರಲ್ಲಿ ಚಿರಾಗ್ ವಾಪಸು ಫೋನು ಮಾಡಿದ. ಮಾತನಾಡುವ ಮನಸ್ಸಾಗಲಿಲ್ಲವಾದ್ದರಿಂದ, ಮತ್ತೆ ಕರೆಯುವೆನೆಂದು ಹೇಳಿ ಮೊಬೈಲನ್ನು ಸೈಲೆಂಟಾಗಿಸಿದೆ. ಮನಸ್ಸು ಶ್ರವಣನ ಕುರಿತಾಗಿ